

ಕುರ್ಚಿಯಲ್ಲಿ ಆಸೀನಳಾದವಳೇ ಎಲ್ಲರೆದುರಿಗೆ ಕಾಲಿನ ಮೇಲೆ ಕಾಲು ಹಾಕಿ ಕುಳಿತಳು. 'ದೇವಪ್ಪಾ... ಬೀಡಿ' ಎಂದು ಹೇಳಿದಳಿರಬೇಕು, ಅಷ್ಟರಲ್ಲೇ ದೇವಪ್ಪ ಬೀಡಿ ಎತ್ತಿಕೊಂಡು ಬಂದು ಕೊಟ್ಟ.

'ಉರಿಸಿ ಯಾರು ನಿನ್ನಪ್ಪ ಕೊಡ್ತಾನಾ?' ದೇವಪ್ಪ ನಗುತ್ತಾ ಸಿಗರ್‌ಲೈಟು ಹೊಡೆದು ಬೀಡಿಯನ್ನು ಹಚ್ಚಿಕೊಟ್ಟ. ಅವಳು ಸುತ್ತುವರಿದವರಾರನ್ನೂ ಗಣನೆಗೆ ತೆಗೆದುಕೊಳ್ಳದೆ ನಿರ್ಬಿಢೆಯಿಂದ ಬೀಡಿ ಎಳೆಯತೊಡಗಿದಳು. ಅದು ನಸುಗತ್ತಲ ಕೋಣೆಯಲ್ಲಿ ಹೊಗೆ ಹೊಗೆಯಾಗಿ ತುಂಬಿಕೊಳ್ಳತೊಡಗಿದವು. ಅವಳು ಕತ್ತಲಲ್ಲಿ ಗೊಣಗಿಕೊಂಡು ಒಬ್ಬಳೇ ಕ್ಷೀಣ ಸ್ವರದಲ್ಲಿ ಕಥೆ ಹೇಳತೊಡಗಿದ್ದಳು. 'ನನ್ನ ಮಗ ಇದ್ದಿದ್ದರೆ ಬೀಡಿ ಇರ್ತಿತ್ತಾ? ಹಾಳು ಬೀಡಿ. ಇಷ್ಟೇ ಸಣ್ಣದು ಹೆಪ್ಪೆ... ಹೆಪ್ಪೆ...' ಅವಳ ಬೀಡಿ ಮುಗಿಯಿತು. ಅವಳು ಅಲ್ಲಿಂದೆದ್ದು ಸೀದಾ ಹೊರ ನಡೆಯತೊಡಗಿದಳು. ಹೋಗುತ್ತಲೇ 'ದೇವಪ್ಪಾ, ಬೀಡಿಯ ಲೆಕ್ಕ ಬರೆದಿಡು' ಅವಳು ಚಪ್ಪಲಿಯಿಲ್ಲದೆ ಸುಡುವ ಟಾರಿನ ರಸ್ತೆಯಲ್ಲಿ ನಡೆದು ಹೊರಟಳು. ಜನ್ನತ್‌ಗೆ ಅಚ್ಚರಿ, ಉಳಿದವರಾರೂ ಅವನಂತೆ ಕುತೂಹಲಿಗರಾದರೆಂದು ಅವನಿಗನಿಸಲಿಲ್ಲ. 'ಅವಳು ಬಂದಿದ್ದು ನಿಜವೇ, ಅಥವಾ ನನ್ನ ಭ್ರಮೆಯಲ್ಲೂ ಆವರಿಸಿದ್ದಾಳೆಯೇ?'

ಜನ್ನತ್ ಸಿಗರೇಟು ಮುಗಿಸಿ ಹೊರಟು ಬಂದ. 'ದೇವಪ್ಪಣ್ಣಾ ಅದ್ಯಾರು?'

'ಅವಳು ಇದೇ ಊರಿನವಳು. ಗಂಡ ಬಿಟ್ಟು ಹೋದ ಬಳಿಕ ಬುದ್ಧಿ ಭ್ರಮಣೆಯಾಗಿದೆ ಸ್ವಲ್ಪ. ಕೆಲವೊಮ್ಮೆ ಬೀಡಿ ಸೇದಲು ಬರುತ್ತಾಳೆ. ವರ್ಷಕ್ಕೊಮ್ಮೆ ಬೀಡಿಯ ಲೆಕ್ಕ ಹೇಳಿ ಹಣ ಕೊಟ್ಟು ಹೋಗುತ್ತಾಳೆ' ಅಂದವನೇ ಗಿರಾಕಿಯೆಡೆಗೆ ಮಾತು ತಿರುಗಿಸಿದ. ಅವನಿಗೆ ಕುತೂಹಲ ತಣಿಯಲೇ ಇಲ್ಲ. ಮಾರನೇ ದಿನ ಮತ್ತದೇ ಅದೇ ಅಂಗಡಿಗೆ ಸಿಗರೇಟು ಸೇದಲು ಹೋದ. ಅವಳ ಬರುವಿಕೆಗಾಗಿ ಕಾದ. ಅವಳು ಬರಲೇ ಇಲ್ಲ.

ಸಂಜೆ ಕಡಲತಡಿಗೆ ಹೋದರೆ ಮಕ್ಕಳು ಫುಟ್ಬಾಲ್ ಆಟದಲ್ಲಿ ಮಗ್ನರಾಗಿದ್ದರು. ಅವರ ಆಟವು ಮುಗಿಯುವ ಹಂತದವರೆಗೂ ತಲುಪಿದರೂ ಅವಳ ಸುಳಿವಿಲ್ಲ. ಎಲ್ಲಿ ಹೋಗಿರಬಹುದು, ನನ್ನ ಕಥಾ ನಾಯಕಿ. ಅವನು ಸಿಗರೇಟೊಂದನ್ನು ಹಚ್ಚಿಕೊಂಡ. ಕಥೆಯೊಂದು ಸುಂದರವಾಗಿ ಹೆಣೆದುಕೊಳ್ಳತೊಡಗಿತು. ಆ ವಾರದ ಕಥೆಯನ್ನು ಸಮಯಕ್ಕೆ ಸರಿಯಾಗಿ ಕೊಟ್ಟೂ ಆಯಿತು. ಪ್ರಕಟಗೊಂಡ ಮರುದಿನವಂತೂ ಬಹಳಷ್ಟು ಓದುಗರ ಪ್ರತಿಕ್ರಿಯೆಯೂ ದಕ್ಕಿತು. ಸಂಭಾವನೆ ಕೂಡಾ